ಇ) ಶ್ರೇಷ್ಠ ನ್ಯಾಯಾಲಯದ ಆದೇಶ ಪ್ರಕಾರ ವಿವಿಧ ಇಲಾಖೆಗಳಲ್ಲಿ ಸಕ್ರಮಗೊಂಡು ಹೆಚ್ಚುವರಿಯಾದ ಅರ್ಹ ದಿನಗೂಲಿ ನೌಕರರನ್ನು ವರ್ಗಾವಣೆ ಮೂಲಕ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈ ಗೊಳ್ಳಲಾಗುತ್ತಿದೆ.

ಸರ್ವೆ ಇಲಾಖೆಯ ಜಮೀನು ನಕಾಶೆಗಳು ನಶಿಸಿರುವ ಬಗ್ಗೆ

೧೨೯೯(೨೧೪೩) ಶ್ರೀ ಕರಿಯಣ್ಣ (ಹೊಳೆಹೊನ್ನೂರು):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಸರ್ವೆ ಇಲಾಖೆಯಲ್ಲಿ ಮೂಲ ರೆಕಾರ್ಡುಗಳಾದ ಜಮೀನಿನ ನಕಾಶೆಗಳು ಸಂಪೂರ್ಣವಾಗಿ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಇದಕ್ಕೆ ಯಾವ ಪರ್ಯಾಯ ವ್ಯವಸ್ಥೆ ಮಾಡಲಾಗುವುದು;

ಆ) ನಕಾಶೆಗಳು ಹೆಚ್ಚು ಕಾಲವಿರುವುದರಿಂದ ಸಂಪೂರ್ಣವಾಗಿ ನಾಶವಾಗಿದ್ದು ಮೂಲ ದಾಖಲೆಯೇ ಇಲ್ಲದ ಈ ರಿಕಾರ್ಡುಗಳನ್ನು ಪುನರ್ನಿರ್ಮಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ನೂತನವಾಗಿ ಮುದ್ರಿಸಲಾಗುವುದು.

ಆ) ಉತ್ತರ 'ಅ'ನಲ್ಲಿದ್ದಂತೆ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕು ಕೊಲಕುಂದ ಗ್ರಾಮದ ಹ್ಯಾಮಲೆಟ್ ಗ್ರಾಮವಾದ ಮಲ್ಕಾಪಲ್ಲಿಯನ್ನು ಪ್ರತ್ಯೇಕ ಕಂದಾಯ ಗ್ರಾಮವೆಂದು ಘೋಷಿಸುವ ಬಗ್ಗೆ

೧೨೯೦(೧೪೨೭)ಶ್ರೀ ಬಸವಂತ ರೆಡ್ಡಿ ಮೊತಕಪಲ್ಲಿ (ಸೇಡಂ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ:-

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕು ಕೊಲಕುಂದ ಗ್ರಾಮದ ಹ್ಯಾಮಲೆಟ್ ಗ್ರಾಮವಾದ ಎರಡು ಸಾವಿರ ಜನಸಂಖ್ಯೆಯುಳ್ಳ ಮಲ್ಕಾಪಲ್ಲಿ ಗ್ರಾಮವನ್ನು ಪ್ರತ್ಯೇಕ ಕಂದಾಯ ಗ್ರಾಮವೆಂದು ಘೋಷಿಸಲು ಪತ್ರ ವ್ಯವಹಾರ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರ ಬಗ್ಗೆ ಸರ್ಕಾರದವರು ಜಿಲ್ಲಾಧಿಕಾರಿಗಳಿಗೆ ಬರೆದಿರುವ ಪತ್ರದ ಬಗ್ಗೆ ಜಿಲ್ಲಾಧಿಕಾರಿಗಳು ಕೈಗೊಂಡಿರುವ ಕ್ರಮವೇನು;

ಇ) ಇದನ್ನು ಪ್ರತ್ಯೇಕವಾದ ಕಂದಾಯ ಗ್ರಾಮವೆಂದು ಘೋಷಿಸುವುದು ಯಾವಾಗ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಹೌದು

ಆ) ಅವಶ್ಯ ಮಾಹಿತಿಗಳನ್ನು ಸರ್ಕಾರಕ್ಕೆ ಒದಗಿಸಿರುತ್ತಾರೆ.

ಇ) ನಿಯಮಾನುಸಾರ ಅವಶ್ಯ ಕ್ರಮ ತೆಗೆದುಕೊಳ್ಳಲು ಆರಂಭಿಸಿದೆ.